ಕೊಟ್ಟಿಲ್ಲ' ಎಂದು ಹೇಳಿದಾಗಲಂತೂ ಸುಜಾತಳ ಮನಸ್ಸು ಅಳತೆಗೂ ಮೀರಿದ ಅಭಿಮಾನವೆಂಬ ಅಂಬರದಲ್ಲಿ ಹಾರಾಡುವ ಪುಟ್ಟ ಹಕ್ಕಿಯ ಹಾಗೆ ಮತ್ತಷ್ಟು ಪುಳಕಿತವಾಗಿತ್ತು. 'ಅದೆಲ್ಲ ನಿಮ್ಮ ಮೇಡಮ್ ಅವರ ದೊಡ್ಡತನ' ಎಂದು ಹೇಳಿದ ಸುಜಾತಳಿಗೆ ಮಾತಿನ ಹೊಳೆಗೆ ಇಳಿದ ಮೇಲೆ ಒಂದು ತಾಸು ಉರುಳಿ ಹೋಗಿದ್ದೇ ಗೊತ್ತಾಗಿರಲಿಲ್ಲ.

ರೂಪಾಳಿಗೆ ಕೌನ್ಸಲಿಂಗ್ ಮಾಡಿದ ಮೇಲೆ ಅವಳನ್ನು ವಿಶ್ರಾಂತಿ ಕೋಣೆಯಲ್ಲಿ ಸ್ವಲ್ಪ ಹೊತ್ತು ಹಾಯಾಗಿ ಮಲಗಲು ಹೇಳಿ ಹೊರಬಂದ ಶ್ರಾವಣಿ, ತನ್ನ ಗೆಳತಿಯನ್ನ, ಕಲಾವತಿಯನ್ನ ಚೇಂಬರಿಗೆ ಕರೆಸಿಕೊಂಡಳು. ನಿಶ್ಯಬ್ದವಾಗಿರುವ ಆ ಕೋಣೆಯಲ್ಲಿ ಸೋಫಾದ ಮೇಲೆ ಕುಳಿತ ಸುಜಾತ ಒಮ್ಮೆ ಇಡೀ ಕೋಣೆಯ ತುಂಬಾ ಕಣ್ಣಾಡಿಸಿದಳು. ಶ್ರಾವಣಿ ಕುಳಿತಿದ್ದ ಕುರ್ಚಿಯ ಮೇಲ್ಭಾಗದ ಗೋಡೆಯನ್ನಲಂಕರಿಸಿದ್ದ ಬುದ್ಧ, ಫ್ರಾಯ್ಡ್, ಯೂಂಗ್ ಗೆಳತಿಯ ತಲೆಕಾಯ್ವುರೆಂಬಂತ್ತಿದ್ದರು. ಟೇಬಲ್ಲಿನ ಮೇಲಿಟ್ಟಿದ್ದ ಮನೋವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ನೋಡುತ್ತಿರುವಾಗ, 'ನಮ್ಮ ರೂಪಾಳ ಸಮಸ್ಯೆ ಏನಂತ ಗೊತ್ತಾಯ್ತ ಡಾಕ್ಟ್ರೇ?' ವೃಥಾ ಕಾಲಹರಣ ಯಾಕೆಂದು ಕಲಾವತಿ ಕೇಳಿದಾಗ, ಸುಜಾತಾಳೂ ಸಹ ಅದೇ ಭಾವನೆಯಲ್ಲಿ ಶ್ರಾವಣಿಯ ಮುಖ ನೋಡಿದಳು.

'ನಿಮ್ಮ ರೂಪಾ ಮಾನಸಿಕವಾಗಿ ತುಂಬಾ ತಾಕಲಾಟವನ್ನು ಅನುಭವಿಸುತ್ತಿದ್ದಾಳೆ. ನೀವು ತಿಳಿದುಕೊಂಡಂತೆ ಇಷ್ಟವಿಲ್ಲದ ಮದುವೆ ಮಾಡಿದ್ದರಿಂದ ಹೀಗಾಗಿದಾಳೆಂಬುದು ಅರ್ಧ ಸತ್ಯ. ಆದರೆ ನಿಜವಾದ ಸಮಸ್ಯೆ ಇರೋದು ಅವಳ ಖಾಸಗಿ ಬದುಕಿನ ಹಾಸಿಗೆ ಸುಖದಲ್ಲಿ' ಎಂದು ಅರ್ಧ ಮುಚ್ಚಿದ ಬಾಗಿಲಿನಂತೆ ಒಗಟಾಗಿ ಮಾತಾಡಿದ ಶ್ರಾವಣಿಯ ಮಾತು ಸುಜಾತಳಿಗೆ ಇನ್ನಷ್ಟು ಕುತೂಹಲ ಕೆರಳುವಂತೆ ಮಾಡಿತ್ತು. 'ನೀರಿನಲ್ಲಿ ಎಮ್ಮೆ ಮುಳುಗಿಸಿ ರೇಟು ಮಾತಾಡಿದ್ರು ಅಮ್ಮಂಗೆ ಆಗಬಾರದಂತಲೇ ನಿನ್ನ ಹತ್ರ ಕರಕಂಬದಿರೋದು. ರೂಪಾಳ ವಿಚಾರದಲ್ಲಿ ಮುಚ್ಚುಮರೆ ಬೇಡಕಣೆ. ಅದೇನಿದ್ರು ನೇರವಾಗಿ ಹೇಳಿಬಿಡು' ಸುಜಾತ ಅವಸರ ಪಡಿಸಿದಳು.

'ಮುಚ್ಚುಮರೆಯ ವಿಚಾರಗಳೆಲ್ಲ ಸ್ಪಷ್ಟ ಆಗಬೇಕನ್ನೋದೇ ನನ್ನ ಉದ್ದೇಶ. ನಿಮಗೆ ಈ ವಿಚಾರ ಬಿಡಿಸಿ ಹೇಳಬೇಕಂದ್ರೆ, ರೂಪಾಳ ಗಂಡ ಸಂಸಾರಕ್ಕೆ ಯೋಗ್ಯನಾಗಿಲ್ಲ. ಈ ವಿಚಾರವನ್ನು ರೂಪಾ ತುಂಬಾ ನೋವಿನಿಂದ ಹೇಳಿಕೊಂಡಿದಾಳೆ. ಮದುವೆಯಾದಾಗಿನಿಂದ ಇಲ್ಲಿತನಕ ಅವರಿಬ್ಬರು ಸೇರೇ ಇಲ್ವಂತೆ. ನಡುರಾತ್ರಿಯಲ್ಲಿ ಅವಳು ಮಾಡಿದ ತಣ್ಣೀರಿನ ಸ್ನಾನಕ್ಕೆ ಲೆಕ್ಕಾನೇ ಇಲ್ಲ...' ಎಂದು ಹೇಳಿದ ಶ್ರಾವಣಿ ಸ್ವಲ್ಪ ಹೊತ್ತು ಮೌನಕ್ಕೆ ಜಾರಿದಳು. ಆ ಮಾತು ಕೇಳಿ ಸುಜಾತಳಿಗೆ ಸಿಡಿಲೆರಗಿದಂತಾಗಿತ್ತು. ಮತ್ತೆ ಶ್ರಾವಣಿಯೇ ಮಾತು ಮುಂದುವರೆಸಿದಳು;



'ಮದುವೆ ಮಾಡುವ ವಿಚಾರದಲ್ಲಿ ಹೆಣ್ಣಿನ ತಂದೆ-ತಾಯಿಗಳು ಯಾಕಿಷ್ಟು ಕಲ್ಲೆದೆಯವರಾಗ್ತಾರೊ ಏನೊ? ನನಗಂತೂ ಒಂಚೂರು ಅರ್ಥಆಗ್ತಿಲ್ಲ. ನೆರೆ-ಹೊರೆಯವರು ಏನು ಅಂದ್ಕೊಳ್ತಾರೊ ಸರೀಕರು ಏನು